ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಸೊರಬ ತಾಲ್ಲೂಕಿನಲ್ಲಿ ಮೂಡಿ ಏತ ನೀರಾವರಿ ಯೋಜನೆಯ ಅಂದಾಜು 1350.00 ಲಕ್ಷ ರೂ. ಗಳಿಗೆ ತಾಂತ್ರಿಕ ಮಂಜೂರಾತಿಯಾಗಿರುತ್ತದೆ. ಈ ಯೋಜನೆಯ ಅಡಿಯಲ್ಲಿ ಬರುವ ರೈತರ ಜಮೀನು ಬಿಟ್ಟು ಕೊಡಲು ತಕರಾರು ಮಾಡಿದ್ದರಿಂದ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ. ಈಗ ಭೂಮಾಲೀಕರಿಗೆ ನೀಡಬೇಕಾದ ಭೂ ಪರಿಹಾರ ಮೊತ್ತಕ್ಕೆ ಸಂಬಂಧಿಸಿದಂತೆ ತೀರ್ಪು ಬಂದಿದ್ದು ಪರಿಹಾರ ನೀಡಿ ಮುಂದಿನ ಕೆಲಸಗಳನ್ನು ಜಾಗ್ರತೆಯಿಂದ ಕೈಗೆತ್ತಿಕೊಳ್ಳಲಾಗುವುದು.

ಮೂಗೂರು ಏತ ನೀರಾವರಿ ಯೋಜನೆಯ ಅಂದಾಜು ರೂ. 862.00 ಲಕ್ಷ ತಾಂತ್ರಿಕವಾಗಿ ಮಂಜೂರಾಗಿದ್ದು, ಮೇಲು ತೊಟ್ಟಿ ಕೆಲಸವು ಟೆಂಡರ್ ಆಧಾರದ ಮೇಲೆ ಪ್ರಗತಿಯಲ್ಲಿದೆ. ಸುಮಾರು 50 ಮೀ ಉದ್ದವರೆಗೆ ಬಲದಂಡೆ ಮಣ್ಣಿನ ಅಗೆತದ ಕೆಲಸ ಹಾಗೂ 2.00 ಕಿ.ಮೀ. ಉದ್ದಕ್ಕೆ ರೈಸಿಂಗ್ ಮೇನ್ ಅಗೆತದ ಕೆಲಸವನ್ನು ಮಾಡಲಾಗಿದೆ. ಈವರೆಗಿನ ಪ್ರಗತಿ ಒಟ್ಟು 38.41 ರೂ. ಲಕ್ಷಗಳಾಗಿರುತ್ತದೆ. ಉಳಿಕೆ ಕಾಮಗಾರಿಗಳನ್ನು ಶೀಘ್ರವಾಗಿ ಕೈಗೆತ್ತಿಕೊಳ್ಳಲಾಗುವುದು.

ಗುಡವಿ ಏತ ನೀರಾವರಿ ಯೋಜನೆಯ ಅಂದಾಜು 14.45 ಲಕ್ಷ ರೂ.ಗಳಿಗೆ 1991-92 ನೇ ಸಾಲಿನಲ್ಲಿ ತಾಂತ್ರಿಕ ಮಂಜೂರಾತಿಯಾಗಿರುತ್ತದೆ. ತದನಂತರ ಮಾನ್ಯ ಮುಖ್ಯ ಮಂತ್ರಿಯವರ ವಿಶೇಷದ ಮೇರೆಗೆ ಸದರಿ ಏತ ನೀರಾವರಿ ಯೋಜನೆಯಿಂದ ನೀರಾವರಿಯಾಗುವ ಅಚ್ಚುಕಟ್ಟಿನ ಪ್ರಮಾಣವನ್ನು ಹೆಚ್ಚಿಸಲು 116.00 ಲಕ್ಷ ರೂ.ಗಳಿಗೆ ಅಂದಾಜನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಹಿಣ್ಣಾಕೊಳ್ಳ ಜಲ ವಿವಾದದ ಹಿನ್ನೆಲೆಯಲ್ಲಿ ಈ ಯೋಜನೆಗೆ ವಿಸ್ತರಿಸಿದ ಅಚ್ಚುಕಟ್ಟಿಗೆ ಬೇಕಾಗುವ ನೀರಿನ ಪ್ರಮಾಣವನ್ನು ಉಪಯೋಗಿಸಲು ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯಿಂದ ಅನುಮತಿ ಪಡೆದು ನಂತರ ತಾಂತ್ರಿಕ ಶಕ್ಯತೆಯನ್ನು ಪರಿಶೀಲಿಸಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ತೆಲಗುಂದ್ಲಿ ಏತ ನೀರಾವರಿ ಯೋಜನೆಯ ಅಂದಾಜು ಆಡಳಿತಾತ್ಮಕ ಅನುಮೋದನೆ ಯಾಗಿರುತ್ತದೆ. ಈ ಯೋಜನೆಗೆ ನೀರನ್ನು ಉಪಯೋಗಿಸಲು ಅನುಮತಿಯನ್ನು ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಗೆ ಸಲ್ಲಿಸಲಾಗಿದ್ದು, ಅನುಮತಿಯನ್ನು ಪಡೆದ ನಂತರ ತಾಂತ್ರಿಕ ಮಂಜೂರಾತಿಯನ್ನು ಪಡೆಯಲಾಗುವುದು. ಮೇಲೆ ತಿಳಿಸಿರುವ ಸಂದರ್ಭದಲ್ಲಿ ಕಾಮಗಾರಿಗಳ ಪ್ರಗತಿ ವಿಳಂಬವಾಗಿದೆ.

ಇ) 1997-98ನೇ ಸಾಲಿನ ಆಯವ್ಯಯದಲ್ಲಿ ಈ ಕಾಮಗಾರಿಗಳಿಗೆ ತಲಾ ಒಂದು ಸಾವಿರ ರೂಪಾಯಿ ಮೊತ್ತ ಇದೆ. ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ತುಮಕೂರು ಜಿಲ್ಲೆಯಲ್ಲಿ ಕಪ್ಪು ಹಾಗೂ ಬೂದು ಪ್ರದೇಶ

2395- ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯ 10 ತಾಲ್ಲೂಕುಗಳ ಪೈಕಿ, 8 ತಾಲ್ಲೂಕುಗಳನ್ನು 'ಕಪ್ಪು' ಹಾಗೂ 'ಬೂದು' ಪ್ರದೇಶವೆಂದು ನಿರ್ಧರಿಸಲಾಗಿದೆಯೇ?

ಅ) *ಇಲ್ಲಿ ಈಗಾಗಲೇ ಕೊರೆದಿರುವ ಕೊಳವೆ ಬಾವಿಗಳಿಗೆ ವಿದ್ಯುತ್ ಸರಬರಾಜು ನೀಡಲು ನಿಲುಗಡೆ ಮಾಡದಿರುವುದು ನಿಜವೇ?*

ಇ) *ಇದರಿಂದಾಗಿ ರೈತರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ? ಇದನ್ನು ಸುಧಾರಿಸಲು ಸರ್ಕಾರವು ಕೈಗೊಂಡಿರುವ ಕ್ರಮವೇನು?*

ಶ್ರೀ ಶರಣಪ್ಪ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಘೋಷಣೆಯಂತೆ ತುಮಕೂರು ಜಿಲ್ಲೆಯ ಈ ಕೆಳಕಂಡ 8 ತಾಲ್ಲೂಕುಗಳನ್ನು 'ಕಪ್ಪು' ಮತ್ತು 'ಬೂದು' ತಾಲ್ಲೂಕುಗಳೆಂದು ನಿರ್ಧರಿಸಲಾಗಿದೆ.

ಎ) 'ಕಪ್ಪು' ತಾಲ್ಲೂಕುಗಳು :

1. ಗುಬ್ಬಿ
2. ಮಧುಗಿರಿ
3. ತಿಪಟೂರು
4. ತುಮಕೂರು
5. ತುರುವೇಕೆರೆ

ಬಿ) 'ಬೂದು' ತಾಲ್ಲೂಕುಗಳು:

1. ಕುಣಿಗಲ್
2. ಶಿರಾ
3. ಕೊರಟಗೆರೆ

ಆ) ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಘೋಷಣೆಯಂತೆ 'ಕಪ್ಪು' ತಾಲ್ಲೂಕುಗಳಲ್ಲಿ ಕೊರೆದಿರುವ ಕೊಳವೆ ಬಾವಿಗಳಿಗೆ ವಿದ್ಯುತ್ ಸರಬರಾಜನ್ನು ನೀಡಲಾಗುತ್ತಿರುವುದಿಲ್ಲ ಹಾಗೂ 'ಬೂದು' ತಾಲ್ಲೂಕುಗಳಲ್ಲಿ 1-1-95ರ ನಂತರ ನಿರ್ದಿಷ್ಟವಾದ ಗರಿಷ್ಠ ಮಿತಿಯನ್ನು ದಾಟಿದ್ದಾದರೆ ಅಲ್ಲಿಯೂ ಸಹ ವಿದ್ಯುತ್ ಸರಬರಾಜನ್ನು ನೀಡಲಾಗುತ್ತಿಲ್ಲ.

ಇ) ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸೂಚನೆಯಂತೆ "ಕಪ್ಪು" ಮತ್ತು 'ಬೂದು' ತಾಲ್ಲೂಕುಗಳಲ್ಲಿ ಈಗಾಗಲೆ ಹೆಚ್ಚಿನ ಮಟ್ಟದಲ್ಲಿ ಭೂಮಿಯಲ್ಲಿರುವ ಅಂತರ್ಜಲವನ್ನು ಬಳಸಿಕೊಂಡಿರುವುದರಿಂದ, ಮುಂದೆ ಇಲ್ಲಿ ನೀರಾವರಿ ಪಂಪಸೆಟ್‌ಗಳನ್ನು ಅಳವಡಿಸುವ ಅವಕಾಶವಿರುವುದಿಲ್ಲ.